ಸಿಸಿ ನಂ. 14/2023 ಪಿಡಬ್ಲೂ :1

ದಿನಾಂಕಃ 18-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಪಿ ಜಿ ಹೆಚ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಠರಾವಿನ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು. ಆರೋಪಿಯು ನೀಡಿದ ಎರಡು ಚೆಕ್‌ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ -2 ಮತ್ತು 3 ಎಂದು ಗುರುತಿಸಲಾಯಿತು. ನಿಪಿ-2 ಮತ್ತು 3 ರಲ್ಲಿರುವ ಸಹಿ ಆರೋಪಿಯ ಸಹಿಗಳಾಗಿರುತ್ತದೆ . ಸದರಿ ಸಹಿಗಳನ್ನು ಕ್ರಮವಾಗಿ ನಿಪಿ -2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಬ್ಯಾಂಕನವರು ಕೊಟ್ಟಿರುವ ಎರಡು ಮೆಮೊಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ -4 ಮತ್ತು 5 ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -6 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು, ಸದರಿ ನೋಟಿಸನ್ನು ಆರೋಪಿಯು ಸ್ವೀಕರಿಸದ ಕಾರಣ ವಾಪಸ್ಸು ಬಂದಿದ್ದು ಅದನ್ನು ಅಂಚೆ ಲಕೋಟೆ ಸಮೇತವಾಗಿ ಹಾಜರು ಪಡಿಸಿರುತ್ತೇವೆ . ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಯಿತು . ಸದರಿ ಅಂಚೆ ಲಕೋಟೆಯನ್ನು ನಿಪಿ -8 ಎಂದು, ಅದರ ಒಳಗಿದ್ದ ನೋಟಿಸನ್ನು ನಿಪಿ-8(ಎ) ಎಂದು ಗುರುತಿಸಲಾಯಿತು . ಎರಡು ಸಾಲದ ಅರ್ಜಿಗಳ ಯಥಾ ನಕಲುಗಳನ್ನು ಹಾಜರು ಪಡಿಸಿರುತ್ತೇನೆ . ಸದರಿ ಸಾಲದ ಅರ್ಜಿಗಳ ಮೂಲ ಪ್ರತಿಗಳನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಸಾಲದ ಅರ್ಜಿಗಳ ಯಥಾ

ನಕಲುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು . ಸಾಲದ ಕರಾರು ಪತ್ರದ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಸಾಲದ ಕರಾರು ಪತ್ರದ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ-11 ಎಂದು ಗುರುತಿಸಲಾಯಿತು . ರಸೀದಿಯ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ರಸೀದಿಯ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ರಸೀದಿಯ ಯಥಾ ನಕಲನ್ನು ನಿಪಿ-12 ಎಂದು ಗುರುತಿಸಲಾಯಿತು . ಎರಡು ಸಾಲದ ಖಾತೆಯ ಉತಾರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ -13 ಮತ್ತು 14 ಎಂದು ಗುರುತಿಸಲಾಯಿತು. ಕೆಡಿಸಿಸಿ ಬ್ಯಾಂಕಿನವರು ಕೊಟ್ಟಿರುವ ಮೆಮೊವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -15 ಎಂದು ಗುರುತಿಸಲಾಯಿತು.

( ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.